**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ, ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ವಿಷಯ: ಕಬ್ಬನ್ ಪಾರ್ಕ್ ನ ವೆಂಕಟಪ್ಪ ಆರ್ಟ್ ಗ್ಯಾಲರಿ ಮುಂಭಾಗದಲ್ಲಿ ಖಾಸಗಿ ಕಂಪನಿ ಮ್ಯಾಪ್ ಆರ್ಟ್ ಗ್ಯಾಲರಿ ನಿರ್ಮಿಸಲು 5 ಎಕರೆ ಜಮೀನು ನೀಡುತ್ತಿರುವುದನ್ನು ರದ್ದುಪಡಿಸುವ ಕುರಿತ**

ದಿನಾಂಕ: 05-03-2025 ಮತ್ತು 06-03-2025 ರ ರಾಜ್ಯದ ಪ್ರಮುಖ ಪತ್ರಿಕೆಗಳಾದ ಕ್ರಮವಾ ವಿಜಯವಾಣಿ ಮತ್ತು ವಿಜಯ ಕರ್ನಾಟಕದಲ್ಲಿ ಈ ಮೇಲೆ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂ ವರದಿಯಾಗಿದೆ. ಈಗಾಗಲೇ ಕಬ್ಬನ್ ಪಾರ್ಕ್ ಗೆ ಹೊಂದಿಕೊಂಡಂತೆ, ವಿಶ್ವೇಶ್ವರಯ್ಯ ಮ್ಯೂಸಿಯ ಹಾಗೂ ಬಾಲಭವನ ಇರುವಾಗ ಕಬ್ಬನ್ ಪಾರ್ಕ್ ನ ವೆಂಕಟಪ್ಪ ಆರ್ಟ್ ಗ್ಯಾಲರಿ ಮುಂಭಾಗದಲ್ ಖಾಸಗಿ ಕಂಪನಿಯವರಿಗೆ ಮ್ಯಾಪ್ ಆರ್ಟ್ ಗ್ಯಾಲರಿ ನಿರ್ಮಿಸಲು 5 ಎಕರೆ ಜಮೀನು ನೀಡುತ್ತಿರುಃ ಸರ್ಕಾರದ ನಡೆ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಕಬ್ಬನ್ ಪಾರ್ಕ್ ನಗರದ ಪರಂಪರೆಯ ಸಂಕೇತ. ಅಲ್ಲಿನ ಪರಿಸರ ಸಂಪತ್ತನ್ನು ಉಳಿಸಿ, ಬೆಳೆಸಿ ಮುಂದಿನ ಜನಾಂಗಕ್ಕೆ ಉಳಿಸುವುದು ಎಲ್ಲ ಕರ್ತವ್ಯ. ನಗರದ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕಬ್ಬನ್ ಪಾರ್ಕ್ ಪಾತ್ರ ಮಹತ್ವವಾದುದ್ದು ಸಾರ್ವಜನಿಕ ಸಮಾಲೋಚನೆ ಇಲ್ಲದೆ ಈ ಯೋಜನೆ ಗುಪ್ತವಾಗಿ ಸಾಗುತ್ತಿದ್ದು, ಸರ್ವೆ ಮುಂತಾದ ಪ್ರಕ್ರಿಯೆಯನ್ನು ಪ್ರಾರಂಭ ಮಾಡಲಾಗುತ್ತಿದೆ.

ಆದ ಕಾರಣ, ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಸಾರ್ವಜನಿಕರು ಕಬ್ಬನ್ ಪಾರ್ಕ್‌ನ ಸಂಘ ಸಂಸ್ಥೆಗಳು ಹೋರಾಟ, ಪ್ರತಿಭಟನೆ ಮಾಡುತ್ತಿರುವುದರಿಂದ ಕಬ್ಬನ್ ಪಾರ್ಕ್ ನಲ್ಲಿ ಖಾಸಗಿ ಕಂಪನಿ ವತಿಯಿಂದ ಮ್ಯಾಪ್ ಆರ್ಟ್ ಗ್ಯಾಲರಿ ನಿರ್ಮಿಸಲು 5 ಎಕರೆ ಜಮೀನು ನೀಡುತ್ತಿರುವುದನ್ನು ತತಕ್ಷಣವೇ ರದ್ದುಪಡಿಸಬೇಕು ಎಂದು ಈ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

**ಉತ್ತರ: ಈ ವಿಷಯವನ್ನು ಪರಿಶೀಲಿಸಿ, ಕಬ್ಬನ್ ಪಾರ್ಕ್ ನಲ್ಲಿ ಖಾಸಗಿ ಕಂಪನಿ ವತಿಯಿಂದ ಮ್ಯಾಪ್ ಆರ್ಟ್ ಗ್ಯಾಲರಿ ನಿರ್ಮಿಸಲು 5 ಎಕರೆ ಜಮೀನು ನೀಡುವುದನ್ನು ಕೈಬಿಡಲಾಗಿದೆ.**

ಸಂಖ್ಯೆ: **HORTI 154 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ**
**ತೋಟಗಾರಿಕೆ ಸಚಿವರು**